"ನೀವು ತೆರೆಯೋದು ಎಷ್ಟು ಗಂಟೆಗೆ?"

"ಬ್ರಾಹ್ಮೀ ಮುಹೂರ್ತಕ್ಕೆ."

ಅದೇನೆಂದು ಕೇಳುವ ಮನಸ್ಸಾಯಿತು, ಆದರೆ ಅವನೆದುರು ನನ್ನ ಅಜ್ಞಾನ ಪ್ರದರ್ಶಿಸಲು ಮನಸ್ಸಾಗಲಿಲ್ಲ. "ಓಹೋ!" ಎಂದೆ.

ಮರುದಿನ 9ಕ್ಕೆ ನಾನು 'ಅಧ್ಯಾತ್ಮ ಈಟರಿ'ಯ ಹತ್ತನೇ ನಂಬರದ ಟೇಬಲ್ ಮುಂದೆ ಹಾಜರಿದ್ದೆ. ಇಡೀ ಜಾಗದ ಡೆಕೋರ್ ಕಂಡು ದಂಗಾದೆ. ಕಮಂಡಲುವಿನಂಥ ನೀರಿನ ಕೂಜೆಗಳು. ಅವುಗಳನ್ನು ದರ್ಭೆಯ ಮೇಲೆ ಇರಿಸಲಾಗಿತ್ತು. ಹೂದಾನಿಗಳಲ್ಲಿ ಹೂಗಳ ಜತೆ ತುಲಸಿ ಕಸ್ತ್ರಗಳು. ಕಂಭಗಳಲ್ಲಿ ರುದ್ರಾಕ್ಷಿ ಮಾಲೆಗಳು, ವಿಭೂತಿ ಉಂಡೆಗಳ ಗೊಂಚಲುಗಳು, ತೂಗುಹಾಕಿದ ಕೆಂಪು ಬಣ್ಣದ ಪಟ್ಟೆ ವಸ್ತ್ರಗಳು. ಅರೆದ ಗಂಧದ ಪರಿಮಳ. ಉರಿಯುವ ಗೂಟದ ನೀಲಾಂಜನ ದೀಪಗಳು ಮತ್ತು ಸುವಾಸ ಸೂಸುವ ಅಗರ್ ಬತ್ತಿಗಳು. ಮೂರು ಕಡೆ ಮೂವರು ಆಚಾರ್ಯರ ಫೋಟೋಗಳು. ಅವರು ಒಬ್ಬರನ್ನೊಬ್ಬರು ನೋಡದಂತೆ ಇದ್ದರು. ಸರ್ವರ್ ಮಾಣಿಗಳು ಯಾವುದೋ ಆಶ್ರಮದ ನವ ವಟುಗಳಂತಿದ್ದರು. ಅವರ ತಲೆಯಲ್ಲಿ ಕ್ರಾಪಿನ ಬದಲು ಜುಟ್ಟು. ಕಾಷಾಯ ಕಚ್ಚೆ, ಉತ್ತರೀಯ ಸಮವಸ್ತ್ರ. ಎಲ್ಲದಕ್ಕು ಹಿನ್ನೆಲೆಯಾಗಿ ಭಜಗೋವಿಂದಂ ಶ್ಲೋಕದಲ್ಲಿ ಶಂಕರಾಚಾರ್ಯರು ಮೂಢಮತಿಗಳನ್ನು ಎಚ್ಚರಿಸುತ್ತಿದ್ದುದು ಕೇಳುವುದಕ್ಕೆ ಖುಷಿಯಾಗುತ್ತಿತ್ತು. ಆಮೇಲೆ ದಾಸರ ಕೀರ್ತನೆಗಳು, ಶರಣರ ವಚನಗಳು. ಒಟ್ಟಾರೆಯಾಗಿ ಧನ್ಯೋಸ್ಮಿ ಎಂಬ ಭಾವ ಬರುವಂತಿತ್ತು ಪ್ರತಿಯೊಂದೂ ವಿಷಯ. ಒಬ್ಬ ವಟು ಬಂದು ನನ್ನ ಮೊಬೈಲ್ ಕಿತ್ತು ಮೆಸೇಜ್ ಚೆಕ್ ಮಾಡಿ ಟೇಬಲಿನ ಮೇಲೊಂದು ಈಟರಿ ಲಿಸ್ಟ್ ಇರಿಸಿ ಸಂಸ್ಕೃತದಲ್ಲಿ ಅದೇನೋ ಹೇಳಿದ. ನಾನು "ತಥಾಸ್ತು!" ಎಂದೆ. ನಾನೀಗ ಅಧ್ಯಾತ್ಮದ ಏಂಬಿಯೆನ್ಸ್‌ಗೆ ಅದೆಷ್ಟು ಬೇಗನೆ ಹೊಂದಿಕೊಂಡೆ ಎಂದು ನನಗೇ ಆಶ್ಚರ್ಯವಾಯಿತು.

ನಾನು ಮೆನೂನ ಮೇಲೆ ದೃಷ್ಟಿ ಹರಿಸಿದೆ. ಅಧ್ಯಾತ್ಮ ಈಟೆರಿಗೆ ಸಮನಾದ ಹೆಸರುಗಳು. ಬ್ರಹ್ಮಾಂಡ ಇಡ್ಲಿ ವಿದ್ ಸಾಂಬಾರ್ ಸಾಗರ್, ಓಂಪುರಿ ವಿದ್ ಹೆವನ್ಲಿ ಹಲ್ವಾ, ಹಾಟ್ ನಾನ್ ವಿದ್ ಮೆಲ್ಟಿಂಗ್ ಬೆಣ್ಣೆ, ಬರ್ನ್ಟ್ ವಿದ್ ಕರ್ಮ ಕುರ್ಮ, ಆತ್ಮನ್ ಚಿತ್ರಾನ್ನ, ಬ್ರಹ್ಮಚಾರಿ ಬನ್ಸ್, ಪಕೋಡಾ ಪಂಚಕನ್ಯಾ, ಸಹಸ್ರಪಾತ್ ಶಾವಿಗೆ, ಧರಂ ಕರಂ ಮಿರ್ಚಿ ಭಜಿ – ಅಯ್ಯೋ ಎಷ್ಟೊಂದು! ನನಗೆ ಇವೆಲ್ಲ ಬೇಕೆಂದು ಎನಿಸಿದರೂ, ಹೊಟ್ಟೆಯೇನೂ ಬ್ರಹ್ಮಾಂಡವಲ್ಲವಲ್ಲ. ನನಗೆ ಇಡ್ಲಿ ಇಷ್ಟವಾದರೂ ನನ್ನ ಬಡ ಜಠರವಾದರೂ ಬ್ರಹ್ಮಾಂಡ ಇಡ್ಲಿಯ ರಿಸ್ಕನ್ನು ಎದುರಿಸೀತೆ? ಬದಲಿಗೆ ನಾನು ಒಂದು ಜೊತೆ 'ಶೂನ್ಯ ದೋಸ ವಿದ್ ಇಮಾಜಿನ್ಡ್ ಕೋಕನಟ್ ಗಟ್ಟಿ ಚಟ್ನಿ'ಗೆ ಹೇಳಿದೆ. ಆ ಹೆಸರು ಹೇಳುತ್ತಲೇ ನನ್ನ ಬಾಯಲ್ಲಿ ನೀರೂರುತ್ತಿತ್ತು. ದೋಸೆಗೆ ಕಾಯುತ್ತ ಒಮ್ಮೆ ನನ್ನ ಆಚೀಚೆ ಕುಳಿತವರ ಕಡೆ ಕಣ್ಣಾಡಿಸಿದೆ. ಎಲ್ಲರೂ ಅಧ್ಯಾತ್ಮ ತಿನಿಸುಗಳಲ್ಲಿ ತಲ್ಲೀನರಾಗಿದ್ದರು. ನೈಫ್ ಮತ್ತು ಫಾರ್ಕ್ ಇಲ್ಲಿ ಮನ್ನಾ. ತಿನ್ನುವವರು ಸ್ವಂತ ಕೈಯಲ್ಲೇ ತಿನ್ನಬೇಕು. ಸ್ಪೂನಿಗೆ ರಿಯಾಯಿತಿ ಇತ್ತು. ಇಬ್ಬರು ಫಾರಿನರ್ಸ್ ಸಹಸ್ರಪಾತ್ ತಿನ್ನಲು ಹೆಣಗಾಡುತ್ತಿದ್ದುದು ಕಂಡುಬಂತು. ಧರಂ ಕರಂ ಮಿರ್ಚಿ ಭಜಿ ತಿನ್ನುತ್ತಿದ್ದವ 'ಉದಕ ಉದಕ' ಎಂದು ನೀರಿಗೆ ಕಿರುಚಾಡುತ್ತಿದ್ದ. ಇನ್ನೊಂದು ಒನ್ ಪ್ಲಸ್ ಥ್ರೀ ಎದುರಿಗೆ ಬ್ರಹ್ಮಾಂಡ ಇಡ್ಲಿಗಳು ಬಂದು ಕೂತುಕೊಂಡಿದ್ದು ಅವುಗಳನ್ನು ಸಾಂಬಾರ್ ಸಾಗರದಲ್ಲಿ ಮುಳುಗಿಸಲಾಗುತ್ತಿತ್ತು.

ಅಷ್ಟರಲ್ಲಿ ನನ್ನ ಶೂನ್ಯ ದೋಸೆಗಳೂ ಬಂದುವು. ಒಂದು ಬಾಳೆ ಕೀತಿನಲ್ಲಿ ಮಕ್ಕಳ ದೋಸೆಯಂಥ ಎರಡು ಉದ್ದಿನ ದೋಸೆಗಳು ಇದ್ದುವು. "ಚಟ್ನಿ?" ಎಂದು ವಟುವನ್ನು ಕೇಳಿದೆ.